www.vijayadasaru.net

# ಶ್ರೀ ವಿಜಯದಾಸರು ತಿಳಿಸಿದ ಕರ್ಮಯೋಗ

ಗಿರಿಯ ಶಿಖರದ ಮ್ಯಾಲೆ ತಲೆಯೂರಿ ಬಹುಕಾಲ
ತರಗೆಲೆ ಮೆದ್ದು ತಪವನ್ನೆ ಮಾಡಿ
ಧರೆಯೆಲ್ಲ ತಿರುಗಿ ಮಾಸೋಪವಾಸವಿದ್ದು
ಚರಿಸಿ ಚಾಂದ್ರಾಯಣವ ಚರುವನ್ನುಂಡು
ಪರಿಪರಿ ಆಶ್ರಮಂಗಳ ಧರಿಸಿ
ಬೆರಳೆಣಿಸುತ ಬೇವ ಬಿಸಿಲೊಳಿದ್ದು
ಬರಿದೆ ತನುವ ಬಳಲಿ ಧಾವತಿಗೊಂಡರೇನಹುದು
ಹರಿಪದದಿ ಮನವೆರಕವಾಗದತನಕ
ಬರಿದೆ ಕ್ರತುವ್ರತ ಜಪಾದಿಗಳ ಪುಣ್ಯ
ಬರಿದಾಗಿ ಬಳಿಕ ಧರೆಗಿಳಿಯಬೇಕು
ವರದೊರದು ಶ್ರುತಿ ಸ್ಮೃತಿ ಪುರಾಣಗಳು ಪೇಳುತವೆ
ಸಿರಿಯರಸ ನಮ್ಮ ವಿಜಯವಿಠಲನ
ಕರಣ ಶುದ್ಧಿಯಲಿ ಮನಮುಟ್ಟಿ ನೆನೆದರೆ ಇದಕೆ
ಸರಿಗಾಣೆ ಸರಿಗಾಣೆ ಸಂದೇಹವಿಲ್ಲಾ ॥

ಸಂಸಾರದಲ್ಲಿ ಸಿಲುಕಿದ ಸಜ್ಜೀವಿ ನಿತ್ಯಸುಖರೂಪದ ಅಮೃತತ್ವವನ್ನು ಪಡೆಯುವುದು ಭಗವಂತನ ಅನುಗ್ರಹದಿಂದ. ಈ ಅನುಗ್ರಹ ಅವನ ಬಗ್ಗೆ ಯಥಾರ್ಥವಾಗಿ ತಿಳಿದಾಗ ಲಭ್ಯ. ಎಂದರೆ ಸಮೀಚೀನ ಜ್ಞಾನದಿಂದ ಮಾತ್ರ ಮುಕ್ತಿ. ಈ ಜ್ಞಾನಕ್ಕೆ ಪ್ರಧಾನ ಸಾಧನವೇ ಕರ್ಮ. ಈ ಕರ್ಮಾಚರಣೆ ಅವರವರ ವರ್ಣ ಆಶ್ರಮಗಳಿಗೆ ಅನುಗುಣವಾಗಿ, ಶಾಸ್ತ್ರೋಕ್ತವಾಗಿ ಕ್ರಮದ್ದಾಗಿರಬೇಕು. ಶ್ರೀವಿಜಯದಾಸರು ಈ ಸದಾಚಾರ-ಸತ್ಕರ್ಮಾಚರಣೆಗಳು ಕೇವಲ ಶುಷ್ಕವಾಗಿದ್ದರೆ, ಕೃಷ್ಣಾರ್ಪಣ ಬುದ್ಧಿ ರಹಿತವಾಗಿದ್ದರೆ, ಸಕಾಮನಾ ಪೂರ್ವಕವಾಗಿದ್ದರೆ ಆತ್ಯಂತಿಕ ಸುಖ ಸಿಗದೆಂದು ಹೇಳುವರು. ಕೇವಲ ಶರೀರ ದಂಡಿಸಿ ಬಹು ಕಠಿಣವಾದ ವ್ರತೋಪವಾಸಗಳು, ಜಪತಪಾದಿಗಳು, ಯಜ್ಞ ಯಾಗಾದಿಗಳೂ ಪೂರ್ಣ ಫಲಕಾರಿಯಾಗದೆನ್ನುವರು. ಈ ಸತ್ಕರ್ಮಾಚರಣೆಗಳಿಂದ ಸಿಗುವ ಫಲವೂ ಶಾಶ್ವತವಾಗಿರದೆಂದು ಭಾವ. ಈ ಎಲ್ಲ ಕರ್ಮಗಳು ಯೋಗವೆಂದೆನಿಸಿದಾಗ ಮಾತ್ರ ಶ್ರೀಹರಿ ಒಲಿದು ಅನುಗ್ರಹಿಸುವ. ಹೀಗೆ ಅಂತಃಕರಣ ಶುದ್ಧಿಯಿಂದ ಶ್ರೀಹರಿಯನ್ನು ನಿಷ್ಕಾಮವಾಗಿ, ಅವನ ಪ್ರೀತ್ಯರ್ಥವಾಗಿ ನೆನೆದರೆ, ಸಮರ್ಪಿಸಿದರೆ ಅದು ಕರ್ಮಯೋಗ ಎಂದೆನಿಸಿ ಇಹದಲ್ಲಿ ಸಕಲಾಭೀಷ್ಟಗಳನ್ನೂ ಪರದಲ್ಲಿ ಮುಕ್ತಿಯನ್ನೇ ಕರುಣಿಸುವ. ಇಲ್ಲಿ ಶ್ರೀ ವಿಜಯದಾಸರು ಮಾಡುವ ಕರ್ಮಗಳಲ್ಲಿಯ ಸೂಕ್ಷ್ಮತೆಯನ್ನು ವಿಶ್ಲೇಷಿಸಿ ಅದರ ಅಂತರ್ಯವನ್ನು ತಿಳಿಹೇಳಿ ಸಜ್ಜನರಿಗೆ ಅನುಗ್ರಹಿಸಿರುವುದನ್ನು ಕಾಣುತ್ತೇವೆ.